ಶ್ರೀ ಎಂ. ವೀರಯ್ಯಸ್ವಾಮಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಂತ್ರಿಗಳು ಹೇಳಿರುವಂತೆ ರೋಗಿಗಳಿಗೆ ಯಾವುದೇ ಸೌಲಭ್ಯ ದೊರಕುವಲ್ಲಿ ತೊಂದರೆಯಾಗಿಲ್ಲ ಎಂದು ಏನು ಹೇಳಿದ್ದಾರೆ, ಆ ಮಾತು ಸತ್ಯಕ್ಕೆ ದೂರವಾದುದು. ಈಗಾಗಲೇ ಕಟ್ಟಡದ ಸುಮಾರು ೭೫ ಪ್ರತಿಶತ ಭಾಗ ಕುಸಿದು ಹೋಗಿದೆ. ಕೇವಲ ಒಬ್ಬರೋ ಇಬ್ಬರೋ ಒಳರೋಗಿಗಳಿಗೆ ಸೇರಲಿಕ್ಕೆ ಬರುತ್ತದೆ. ಯಾವ ರೋಗಿಗಳಿಗೆ ಅಲ್ಲಿ ಸೇರಲು ಆಗುತ್ತಿಲ್ಲ. ಅವರಿಗೆ ವೈದ್ಯಕೀಯ ಸೌಲಭ್ಯ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಎರಡನೆಯದಾಗಿ ಈಗಾಗಲೇ ಕಾಮಗಾರಿ ಇಲಾಖೆಯಿಂದ ತಯಾರಿಸಿದ ೫.೯೦ ಲಕ್ಷ ರೂಪಾಯಿಗಳ ಅಂದಾಜು ಪ್ರತಿಯನ್ನು ಮಂತ್ರಿಗಳಿಗೆ ಕೊಟ್ಟಿದ್ದೇನೆ ಅದನ್ನು ಮಂಜೂರು ಮಾಡಿದರೆ ಕಟ್ಟಡವನ್ನು ಕಟ್ಟಲಿಕ್ಕೆ ಸಾಧ್ಯವಾಗಬಹುದೆ. ಅದನ್ನು ರಿಪೇರಿ ಮಾಡಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಬೇರೆ ಕಟ್ಟಡವನ್ನೇ ಕಟ್ಟಬೇಕಾಗುತ್ತದೆ ಆದಕ್ಕಾಗಿ ೫.೯೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಒತ್ತಾಯಪಡಿಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಆಬಕಾರಿ ಸಚಿವರು).—ಮಾನ್ಯ ಅಧ್ಯಕ್ಷರೇ, ಒಳರೋಗಿಗಳಿಗೆ ಚಿಕಿತ್ಸೆ ಪಡೆಯುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ೧೪ ಒಳರೋಗಿಗಳಿಗೆ ಚಿಕಿತ್ಸೆ ಪಡೆಯುವುದಕ್ಕೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ ಮತ್ತು ತುರ್ತು ರೋಗಿಗಳಾಗಿ ಬಂದವರಿಗೆ ಚಿಕಿತ್ಸೆ ಮಾಡಲಿಕ್ಕೆ ಅವಕಾಶ ಮಾಡಲಾಗಿದೆ. ಬಿದ್ದುಹೋಗಿರತಕ್ಕ ಕಟ್ಟಡದ ಬಗ್ಗೆ ದುರಸ್ತಿ ಕಾರ್ಯವನ್ನು ಪೂರ್ವ ಭಾವಿಯಾಗಿ ಮಾಡಲಾಗುವುದು. ಹಣವನ್ನು ಮಂಜೂರು ಮಾಡದೇ ಕೆಲಸ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಹಣವನ್ನು ಮಂಜೂರು ಮಾಡುತ್ತೇವೆ.

ಅಧ್ಯಕ್ಷರು.—ವೇದಾಂತ ಹೆಬ್ಬಿಗೆಯವರು ತಾವು ಗಮನ ಸೆಳೆಯಿರಿ.

(iii ಮೈಸೂರಿನ ಜಯಚಾಮರಾಜೇಂದ್ರ ದೃಶ್ಯ ಕಲಾ ಅಕಾಡಮಿಗೆ ಸರ್ಕಾರದವರು ನೀಡಿರುವ ಹಣದ ಬಗ್ಗೆ

ಶ್ರೀ ವೇದಾಂತ ಹೆಬ್ಬಿಗೆ.—ಮೈಸೂರಿನ ಜಯಚಾಮರಾಜೇಂದ್ರ ದೃಶ್ಯ ಕಲಾ ಅಕಾಡಮಿಗೆ ಸರ್ಕಾರದವರು ನೀಡಿರುವ ಹಣದ ಬಗ್ಗೆ ಮಂಖ್ಯಿಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು) (ಮುಖ್ಯ ಮಂತ್ರಿಗಳ ಪರವಾಗಿ) —ಅಧ್ಯಕ್ಷರೇ, ನಾನು ಈಗ ಈ ಹೇಳಿಕೆಯನ್ನು ಕೊಡಬಯಸುತ್ತಿದ್ದೇನೆ.

ಚಾಮರಾಜೇಂದ್ರ ದೃಶ್ಯಕಲಾ ಅಕಾಡಮಿಯು ದೇಶದಲ್ಲಿ ಈಗಾಗಲೇ ಇರುವ ಪ್ರಮುಖ ಕಲಾ ಶಾಲೆಗಳಾದ ಬರೋಡಾದ ಎಂ. ಎಸ್. ವಿಶ್ವವಿದ್ಯಾನಿಲಯದ ಲಲಿತಕಲೆಗಳ ವಿಭಾಗ, ಮುಂಬಯಿಯ ಸರ್ ಜೆ. ಜೆ. ಕಲಾಶಾಲೆ ಮತ್ತು ಶಾಂತಿ ನಿಕೇತನಗಳಲ್ಲಿ ದೊರೆಯುವ ಕಲಾ ಶಿಕ್ಷಣಕ್ಕೆ ಸಮಾನವಾದ ಪ್ರಥಮ ದರ್ಜೆಯ ಮತ್ತು ಅತ್ಯಾಧುನಿಕ ಕಲಾ ಶಿಕ್ಷಣಕ್ಕೆ ಸಂಪೂರ್ಣ ನವೀನ ಸಾಧನ ಸಾಕಾರ್ಯವನ್ನು ನಿರ್ವಿಸಿದೆ

ಐದನೆಯ ಶೈಕ್ಷಣಿಕ ವರ್ಷದಲ್ಲಿ ಕಾಲಿರಿಸಿದ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ ಸಂಸ್ಥೆಯಂ ಪ್ರಸಕ್ತ ೧೧೨ ವಿದ್ಯಾರ್ಥಿಗಳಿಗೆ ಪದವಿ ಮಟ್ಟದ ಶಿಕ್ಷಣವನ್ನು ನೀಡುತ್ತಿದೆ. ಈ ವಿದ್ಯಾರ್ಥಿಗಳು ಎರಡು ವರ್ಷಗಳ ಅವಧಿಯ ಮೂಲ ಶಿಕ್ಷಣ ತರಗತಿಗಳಲ್ಲಿ ಮತ್ತು ಮೂರು ವರ್ಷ ಅವಧಿಯ ಆರು ವಿಶೇಷ ಅಧ್ಯಯನ ತರಗತಿಗಳಲ್ಲಿ ಈ ಮುಂದಿನ ವಿಶೇಷಕಲಾ ವಿಷಯಗಳನ್ನು (ಅನುಬಂಧ 'ಎ' ರಲ್ಲಿ ವಿವರಿಸಿರುವಂತೆ) ಅಧ್ಯಯನ ಮಾಡುತ್ತಿದ್ದಾರೆ.

೧) ರೇಖಾಚಿತ್ರ ಮತ್ತು ವರ್ಣಚಿತ್ರ
೨) ವಾಸ್ತುಶಿಲ್ಪ
೩) ಗ್ರಾಫಿಕ್ಸ್
೪) ಅನ್ವಯಿಕ ಕಲೆ
೫) ಛಾಯಾಚಿತ್ರ ಕಲೆ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ
೬) ಕಲೆ ಮತ್ತು ಸೌಂದರ್ಯ ಶಾಸ್ತ್ರಗಳ ಚರಿತ್ರೆ

ಈ ೧೦೨ ವಿದ್ಯಾರ್ಥಿಗಳಿಗೆ ಅಭಿರುಚಿಯ ಪರೀಕ್ಷೆಯ ಆಧಾರದ ಮೇಲೆ ಪ್ರವೇಶ ನೀಡಲಾಗಿದ್ದು ಅವರು ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಹಾಗೂ ಕೆಲವರು ಇತರ ದಕ್ಷಿಣ ರಾಜ್ಯಗಳಿಂದ ಬಂದವರಾಗಿದ್ದಾರೆ.

ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ ಸಂಸ್ಥೆಯು ಶಾಂತಿನಿಕೇತನದ ಮಾದರಿಯಲ್ಲಿ ವಸತಿ ಸೌಕರ್ಯವುಳ್ಳ ಕ್ಯಾಂಪಸ್‌ನ್ನು ಅದೇ ಉದ್ದೇಶಕ್ಕಾಗಿ ನವಂಬರ್ ೧೯೮೫ ರಲ್ಲಿ ಪರ್ಗಾಯಿಸಲಾದ ಅಲೋಕದಲ್ಲಿ (ಮೈಸೂರಿನ ಬಳಿಯ ಇಲ್ವಾಲದ ರಾಜ್ಯ ನಿಲಯದ ಸುತ್ತಲಿನ ೫೦ ಎಕರೆ ಭೂಮಿಯಲ್ಲಿ) ನಿರ್ಮಿಸಲು ಯೋಚಿಸಿದೆ. ಪ್ರಸ್ತುತ ೧೮೦ ವರ್ಷಗಳ ಹಳೆಯ ರಾಜ್ಯ ನಿಲಯವನ್ನು ೬.೧ ಲಕ್ಷ ರೂ.ಗಳ ವೆಚ್ಚದಲ್ಲಿ ನವೀಕರಣಗೊಳಿಸಲಾಗುವುದು ಅಲೋಕವನ್ನು ಸಂಪೂರ್ಣವಾಗಿ ೬ ಬೇರೆ ಬೇರೆ ದೃಶ್ಯಕಲಾ ವಿಭಾಗಗಳನ್ನು ಸಜ್ಜುಗೊಳಿಸಲು ಅನುಕೂಲವಾಗುವಂತೆ ಅಭಿವೃದ್ಧಿ ಪಡಿಸಿದಾಗ ಈ ರಾಜ್ಯ ನಿಲಯವನ್ನು ಮತ್ತು ಸಂಗ್ರಹಾಲಯ ಮತ್ತು ಕಲಾ ಶಾಲೆಯನ್ನಾಗಿ ಪರಿವರ್ತಿಸಲಾಗುವುದು. ಮುಂಬರುವ ೫ ವರ್ಷಗಳಲ್ಲಿ ಬರಬಹುದಾದ ಸುಮಾರು ೫೦೦ ಜನ ವಿದ್ಯಾರ್ಥಿಗಳು ಮತ್ತು ೧೦೦ ಜನ ಸಿಬ್ಬಂದಿಗಾಗಿ ಸ್ಟುಡಿಯೋಗಳು, ಕಾರ್ಯಾಗಾರಗಳು, ತರಗತಿ ಕಟ್ಟಡಗಳು, ವಿದ್ಯಾರ್ಥಿ ನಿಲಯಗಳು, ಸಿಬ್ಬಂದಿ ಕ್ವಾರ್ಟರ್ಸ್‌ಗಳು, ಮನರಂಜನೆ ಮತ್ತು ಕ್ರೀಡಾ ಸೌಲಭ್ಯಗಳನ್ನು ಒದಗಿಸಲಾಗುವುದು.

ಅಗತ್ಯವಾದ ಹಣದ ಬಗ್ಗೆ ಗವರ್ನಿಂಗ್ ಕೌನ್ಸಿಲ್‌ನವರು ಪರಿಶೀಲಿಸುತ್ತಾರೆ. ಸರ್ಕಾರವು ಇದನ್ನು ಪರಿಗಣಿಸಿ ಹಣ ಒದಗಿಸಲು ಏರ್ಪಾಡು ಮಾಡುವುದು. ಒಂದು ವೇಳೆ ಇನ್ನೂ ಹೆಚ್ಚಿನ ಹಣ ಬೇಕಾದ್ದಲ್ಲಿ ಈ ಬಗ್ಗೆ ಪರಿಶೀಲಿಸಲಾಗುವುದು.

೧-೦೦ ಪಿ. ಎಂ.

ಶ್ರೀ ವೇದಾಂತ ಹೆಮ್ಮಿಗೆ.—ಈ ಕಲಾ ಶಾಲೆಯದು ಒಂದು ಪ್ರಾಸ್‌ಪೆಕ್ಟ್ಸ್ ಇದೆ. ಆ ಒಂದು ಪ್ರಾಸ್‌ಪೆಕ್ಟ್ಸ್‌ನಲ್ಲಿ ಏನು ಹೇಳಿದ್ದಾರೆಂದರೆ,

"Academic Objectives.—

In the first phase of approved master plan to offer professional courses in various branches of visual arts leading to Degrees affiliated to Mysore University. The Five year degree course have common, two year foundation followed by three year elective specialisations under three departments"

ಇದು ಒಂದು. ಈ ಜಯಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯ ಬಗ್ಗೆ ಖ್ಯಾತ ರಷ್ಯ ಕಲಾವಿದ ರೋರಿಚ್‌ರವರನ್ನು ನೇಮಕ ಮಾಡಿ ಇದರ ಬಗ್ಗೆ ಒಂದು ವರದಿಯನ್ನು ಕೊಡಬೇಕೆಂದು ಕೇಳಿದ್ದರು. ಈ ಬಗ್ಗೆ ರೋರಿಚ್‌ರವರು ಕೊಟ್ಟ ವರದಿ ಏನಾಯಿತು ? ಆ ವರದಿಯ ಮೇಲೆ ಜಯಚಾಮರಾಜೇಂದ್ರ ಕಲಾಶಾಲೆಯಲ್ಲಿ ಏನೇನು ಕ್ರಮ ತೆಗೆದುಕೊಂಡಿದ್ದೀರಿ ? ಹಳೆಯ ಕಟ್ಟಡದ ವಸ್ತು ಸಂಗ್ರಹಾಗಾರದಲ್ಲಿ ಹಾಲಿ ಇರತಕ್ಕಂತಹ ಉಪಕರಣಗಳನ್ನು ಉಪಯೋಗಿಸಿಕೊಳ್ಳಬೇಕು ಎಂಬ ಒಂದು ಯೋಜನೆ ಇತ್ತು. ಅದು ಹೆಸರಿಗೆ ಮಾತ್ರ ಇದೆಯೇ ? ಅಥವಾ ಆ ಯೋಜನೆಯನ್ನು ಜಾರಿಗೆ ತರುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ ? ಪಾಠ್ಯ ಆಲೋಚನೆಯಲ್ಲಿ ಇದನ್ನು ತೆಗೆದುಕೊಂಡು ಐ.ಟಿ.ಐ. ರೀತಿಯ ಯೋಜನೆಯನ್ನು ಜಾರಿಗೆ ತರಬೇಕು, ಆದರಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡಬೇಕೆಂಬ ಯೋಜನೆ ಇತ್ತು. ಅದನ್ನು ಏನು ಮಾಡಿದ್ದೀರಿ ಎಂಬುದರ ಬಗ್ಗೆ ಪೂರ್ಣ ಸಚಿವರಿಂದ ವಿವರಣೆಯನ್ನು ಪಡೆಯಲ್ಲಿಚ್ಚಿಸಿದ್ದೇನೆ.

ಶ್ರೀ ಡಿ. ಮಂಜುನಾಥ್.—ಇವರ ಬಗ್ಗೆ ನನ್ನ ಹೇಳಿಕೆಯಲ್ಲೇ ಹೇಳಿದ್ದೇನೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಇದಕ್ಕೆ ಅಫಿಲಿಯೇಷನ್ ಕೊಟ್ಟು, ಸರಿಯಾದ ರೀತಿಯಲ್ಲಿ ಈ ಒಂದು ಸಂಸ್ಥೆಯನ್ನು ನಡೆಸಬೇಕು, ಮತ್ತು ಇದಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂಬ ಯೋಜನೆ ಇದೆ. ಮುಂದಿನ ೫ ವರ್ಷಗಳಲ್ಲಿ ಇದಕ್ಕೆ ಹೆಚ್ಚು ಅನುಕೂಲತೆಗಳು ಬರುವ ಸಂದರ್ಭ ಇದೆ. ಅಲ್ಲಿ ವ್ಯಾಸಂಗ ಮಾಡುವಂತಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಕಟ್ಟಡ ಸಿಲ್ಲವನ್ನೂ ಸರ್ಕಾರ ನೇರವಾಗಿ ನಿರ್ವಹಣೆ ಮಾಡುತ್ತದೆ.

ಶ್ರೀ ರಾಜುಗೌಡ.—ಇದುವರೆವಿಗೂ ೪೦ ಲಕ್ಷ ರೂಪಾಯಿಗಳು ಖರ್ಚಾಗಿವೆ ಅಂತ ಹೇಳಿದ್ದೀರಿ ಯಾವ್ಯಾವ ವರ್ಷ, ಯಾವ್ಯಾವ ವಿಭಾಗಗಳಿಗೆ ಖರ್ಚು ಮಾಡಿದ್ದೀರಿ ? ೯–೪–೮೫ ರಲ್ಲಿ ೩೯ ಜನ ಪರೀಕ್ಷೆಗೆ ಕುಳಿತಿದ್ದು, ಅವರುಗಳಲ್ಲಿ ೩೭ ಜನ ಪಾಸಾಗಿದ್ದಾರೆ. ಯಾರು ಇಬ್ಬರು ಪರೀಕ್ಷೆಗೆ ಹಾಜರಾಗಿರಲಿಲ್ಲವೊ ಅವರಿಗೂ ಮಾರ್ಕ್ಸ್‌ಗಳನ್ನು ಕೊಟ್ಟಿದ್ದಾರೆ. ಆ ಒಂದು ಸಮಿತಿಯಲ್ಲಿ ಮಂಖ್ಯಿಮಂತ್ರಿಗಳು ಅಧ್ಯಕ್ಷರಾಗಿದ್ದಾರೆ. ಆ ಒಂದು ಸಮಿತಿಯು ಏಷ್ಟು ಸಾರಿ ಸೇರಿದೆ ? ಯಾವ್ಯಾವ ತೀರ್ಮಾನವನ್ನು ಮಾಡಿದೆ ಎಂಬುದಾಗಿ ತಿಳಿಸುತ್ತೀರಾ ?

ಶ್ರೀ ಡಿ. ಮಂಜುನಾಥ್.—ಯಾವ್ಯಾವ ವಿಚಾರವನ್ನು ತೀರ್ಮಾನ ಮಾಡಿದೆ ಎಂಬುದರ ಬಗ್ಗೆ ವಿವರ ನನ್ನ ಹತ್ತಿರ ಇಲ್ಲ ಮಾನ್ಯ ಸದಸ್ಯರಿಗೆ ನಂತರ ವಿವರವನ್ನು ತರಿಸಿಕೊಡುತ್ತೇನೆ. ಒಟ್ಟಿನಲ್ಲಿ ಈ ಒಂದು ಸಂಸ್ಥೆಯನ್ನು ಸರಿಯಾದ ರೀತಿಯಲ್ಲಿ ನಡೆಸಬೇಕು. ಇದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಿ ಎಲ್ಲ ರೀತಿಯಲ್ಲಿ ಈ ಶಾಲೆಯನ್ನು ಸಜ್ಜುಗೊಳಿಸಬೇಕೆಂಬುದರ ಬಗ್ಗೆ ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದ್ದೇವೆ. ಸಮಿತಿಯು ಆದಷ್ಟು ಜಾಗ್ರತೆ ಸೇರಿ ಮುಂದಿನ ಕೆಲಸಕಾರ್ಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಂತೆ ಒತ್ತಾಯ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—೯–೪–೮೫ರಲ್ಲಿ ಅಲ್ಲಿ ವಾರ್ಷಿಕ ಪರೀಕ್ಷೆಯೊಂದು ನಡೆಯಿತು. ಆ ಪರೀಕ್ಷೆಯಲ್ಲಿ ಮಲೇಶಿಯಾದ ಜಾನ್ ಜಕೋರಿಯಾ ಎಂಬ ವಿದ್ಯಾರ್ಥಿ ಪರೀಕ್ಷೆಗೆ ಕುಳಿತಿರಲಿಲ್ಲ. ಆದರೆ ಡೀನ್‌ರವರು ಅವರಿಗೆ ಮಾರ್ಕ್ಸನ್ನು ಕೊಟ್ಟಿದ್ದಾರೆ. ಆ ಶಾಲೆಯಲ್ಲಿನ ಅಧ್ಯಾಪಕರು ಸೇರಿ ಅಂದು ವಾರ್ತಾ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿದ್ದಂತಹ ಶ್ರೀಮಾನ್ ಜೀವ ರಾಜ್ ಆಳ್ವರವರಿಗೆ ಒಂದು ಅರ್ಜಿಯನ್ನು ಕೊಟ್ಟರು. ಆ ಅರ್ಜಿಯಲ್ಲಿ ಆ ಶಾಲೆಯಲ್ಲಿ ಏನೇನು ಅನ್ಯಾಯ ನಡೆಯುತ್ತಿದೆ ಎಂಬುದನ್ನು ತಿಳಿಸಿ, ಇದನ್ನು ಕೂಡಲೇ ಸರಿಪಡಿಸಬೇಕೆಂದು ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಆ ಅರ್ಜಿಯಲ್ಲಿ ಅಲ್ಲಿನ ೬ ಜನ ಅಧ್ಯಾಪಕರುಗಳು ರುಜು ಮಾಡಿದ್ದಾರೆ. ಆದರೆ ೬ ನೇಯವರು ಜಿ. ಬ ಉಪಾಧ್ಯಾಯ. ಇವರು ಆ ಸಂಸ್ಥೆಯ ಸ್ಥಾಪಕ ಈಗ ಹಾಲಿ ಇರತಕ್ಕಂತಹ ಡೀನ್‌ಗೆ ಯಾವ್ಯಾವ ವಿದ್ಯಾರ್ಹತೆ ಇದೆಯೋ ಅದೆಲ್ಲಾ ವಿದ್ಯಾರ್ಹತೆಯನ್ನು ಹೊಂದಿದವರಾಗಿದ್ದಾರೆ. ಇವರನ್ನು ಬಿಟ್ಟು ಶ್ರೀ ದೇಶ್‌ಪಾಂಡೆಯವರಿಗೆ ಡೀನ್ ಹುದ್ದೆಯನ್ನು ಕೊಟ್ಟಿದ್ದರ ಸಲುವಾಗಿ ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಜೊತೆಗೆ ಶ್ರೀ ದೇಶ್‌ಪಾಂಡೆ ಹಾಗೂ ಅಲ್ಲಿಯ ನೌಕರ ವರ್ಗದವರ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ This institution Dean says that it is affiliated to Mysore University but the Vice-Chancellor of the Mysore University says it is not affiliated to the Mysore University. ಇದು ಬಹಳ ಮುಖ್ಯವಾದ ಪ್ರಶ್ನೆ. ಶ್ರೀ ದೇಶಪಾಂಡೆಯವರು ೧೯೮೪ರಲ್ಲಿ ಮೈಸೂರಿನಿಂದ ಬರೋಡಕ್ಕೆ ರೈಲಿನಲ್ಲಿ ಪ್ರಯಾಣ ಮಾಡಿದರು. ರಿಸರ್ವೇಶನ್ ಟಿಕೆಟ್ ನಂ. ೫೭೨೪೩೭ (ಇದು ಮೈಸೂರು ರೈಲ್ವೇ ನಿಲ್ದಾಣದಲ್ಲಿ ದಾಖಲೆ ಇದೆ) ಆದರೆ ಆವತ್ತು ಅವರದ್ದು ಮೈಸೂರಿನ ಅವರ ಕಛೇರಿಯಲ್ಲಿ ಅಟೆಂಡೆನ್ಸ್ ಇದೆ. ನಂತರ ೩೦–೧೧–೮೫ ರಲ್ಲಿ ಈ ವ್ಯಕ್ತಿ ಬೆಂಗಳೂರಿನಲ್ಲಿ ನಡೆದ ಲಲಿತ ಕಲಾ ಅಕಾಡೆಮಿಯ ೧೫ ನೇಯ ವಾರ್ಷಿಕ ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದು, ಲಲಿತ ಕಲಾ ಅಕಾಡೆಮಿಯಲ್ಲಿ ದಾಖಲೆ ಇದೆ. ಆ ದಿವಸವೂ ಇವರ ಅಟೆಂಡೆನ್ಸ್ ಇದೆ. ನಂತರ ೧೧–೧೧–೮೫ ರಲ್ಲಿ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ನಡೆದ ಕ್ಯಾಮಲ್ ಕಲರ್ ಕಂಪನಿಯವರ ಕಲಾ ಪ್ರದರ್ಶನದಲ್ಲಿ ತೀರ್ಪುಗಾರರಾಗಿ ಭಾಗವಹಿಸಿದ್ದ ಇವರು ಆ ಮೂರು ದಿನಗಳೂ ಮೈಸೂರಿನಲ್ಲಿ ಅಟೆಂಡೆನ್ಸ್ ಹಾಕಿದ್ದಾರೆ. ನಂತರ ೧೫–೯–೮೫ರಂದು ಇವರು ಬೆಂಗಳೂರಿನಲ್ಲಿದ್ದರು. ಅಂದು ಸಂಧ್ಯಾಹ್ನ ಲಲಿತ ಕಲಾ ಅಕಾಡೆಮಿಯ ಪುಸ್ತಕದಲ್ಲಿ ತಮ್ಮ ಕೃತಿಗಳನ್ನು ಸಲ್ಲಿಸಿದ್ದ ದಾಖಲೆ ಇದೆ. ಅದೂ ಸಹ ಇವರು ಹಾಜರಿಯನ್ನು ಮೈಸೂರಿನ ಕಛೇರಿಯಲ್ಲಿ ಹಾಕಿದ್ದಾರೆ. ನಂತರ ೧೮–೮–೮೫ರಂದು ಬರೋಡಕ್ಕೆ ಹೋಗಿದ್ದಾರೆ. ಈ ಬಗ್ಗೆ ಮೈಸೂರು ರೈಲ್ವೇ ನಿಲ್ದಾಣದ ರಿಸರ್ವೇಷನ್ ಕೌಂಟರ್ ಸಲ್ಲಿ ದಾಖಲೆ ಇದೆ. ೧೨ ದಿವಸ ಬರೋಡದಲ್ಲೇ ಇದ್ದೇ ಎಂದು ಹೇಳಿ ಆ ನಂತರ ತಡವಾಗಿ ಬಂದು ಆ ೧೨ ದಿವಸಗಳೂ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿದ್ದಾರೆ. ನಂತರ ೫–೧೦–೮೫ ರಲ್ಲಿ ಬರೋಡಕ್ಕೆ ಇಲ್ಲಿಯ ಒಬ್ಬ ಅಧ್ಯಾಪಕಿ ರಂಜನಾ ಪೂವಯ್ಕರ್ ಎನ್ನುವವರ ಜೊತೆಯಲ್ಲಿ ಪ್ರಯಾಣ ಮಾಡಿದಾರೆ. ಈ ಬಗ್ಗೆಯೂ ಮೈಸೂರು ರೈಲ್ವೇ ನಿಲ್ದಾಣದ ರಿಸರ್ವೇಷನ್ ಕೌಂಟರ್‌ನಲ್ಲಿ ದಾಖಲೆ ಇದೆ. ಆ ದಿವಸವೂ ಕೂಡ ಹಾಜರಿ ಪುಸ್ತಕದಲ್ಲಿ ಸಹಿ ಮಾಡಿದ್ದಾರೆ. ನಂತರ ೧೮–೧೧–೮೫ ರಂದು ೧೦ ದಿನಗಳ

ಕಾಲ ಉದಯಪುರಕ್ಕೆ ತಮ್ಮ ಸಂಬಂಧಿಕರೊಬ್ಬರ ಮದುವೆಗೆ ಹೋಗಿ ಬಂದು ಆಗಲೂ ಸಹ ವಿದ್ಯಾಲಯದ ಹಾಜರಿ ಪುಸ್ತಕದಲ್ಲಿ ಸಹಿ ಮಾಡಿದ್ದಾರೆ. ಈ ಬಗ್ಗೆಯೂ ಮೈಸೂರು ರೈಲ್ವೇ ನಿಲ್ದಾಣದ ರಿಸರ್ವೇಷನ್ ಕೌಂಟರ್‌ನಲ್ಲಿ ದಾಖಲೆ ಇದೆ. ಆದ್ದರಿಂದ ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳಬೇಕೆಂದರೆ ಇದರ ಬಗ್ಗೆ ಒಂದು ವಿಚಾರಣೆ ನಡೆಯಬೇಕು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು ಈಗ ಕೆಲವು ಗಂಭೀರವಾದ ಆಪಾದನೆಗಳನ್ನು ಮಾಡಿದ್ದಾರೆ. ಅದರ ಬಗ್ಗೆ ವಿಚಾರಣೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ನಿಯಮ-೩೩೪ರ ಮೇರೆಗೆ.

೧) ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿರುವವರನ್ನು ಖಾಯಂ ಗೊಳಿಸುವ ಬಗ್ಗೆ.

(ಶ್ರೀ ಬಿ. ಸ್ವಾಮಿ ರಾವ್‌ರವರ ಪರವಾಗಿ ಅಧ್ಯಕ್ಷರೇ ನೋಟೀಸ್‌ನ್ನು ಓದಿದರು).—

ಅಧ್ಯಕ್ಷರು.—ಅದು ಈ ರೀತಿ ಇದೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ದಿನಗೂಲಿಯ ಮೇಲೆ ಹಲವಾರು ವರ್ಷಗಳಿಂದ ಕೆಲಸ ಮಾಡಿಕೊಂಡಿರುವ ಅಂದಾಜು ೩೫೦೦ ಕೃಷಿ ಕಾರ್ಮಿಕರಿಗೆ ಸಮರ್ಪಕ ಕೆಲಸ ಕೊಡದಿರುವುದು, ಕರ್ನಾಟಕ ಸರ್ಕಾರದ ಆಜ್ಞೆ ಮತ್ತು ಶ್ರೇಷ್ಠ ನ್ಯಾಯಾಲಯದ ಆಜ್ಞೆಯ ಪ್ರಕಾರ ಖಾಯಂಗೊಳಿಸದಿರುವುದು ಮತ್ತು ಐದು ವರ್ಷದ ಮೇಲ್ಪಟ್ಟು ಸೇವೆ ಸಲ್ಲಿಸಿದವರ ಖಾಯಂ ಮಾತಿಗೆ ಸರ್ಕಾರದ ಆಜ್ಞೆ ಡಿ. ಸಿ. ಆರ್. ೧೧ ಎಸ್. ಎಲ್. ಸಿ. ೮೫, ದಿನಾಂಕ ೧೩ನೇ ಜುಲೈ ೧೯೮೬ರ ಪ್ರಕಾರ ಆಗಿದ್ದರೂ ಖಾಯಂ ಮಾತಿಗೆ ವಿಳಂಬ ಆಗಿರುವುದು ಇತ್ಯಾದಿಗಳ ಕುರಿತಂತೆ ಸರ್ಕಾರದ ಸ್ಪಷ್ಟ ಉತ್ತರ ಬಯಸುತ್ತಾ, ಕೃಷಿ ವಿಶ್ವ ವಿದ್ಯಾನಿಲಯದ ದಿನಗೂಲಿ ಆಧಾರಿತ ಕೃಷಿ ಕಾರ್ಮಿಕರ ಬಗ್ಗೆ ಉತ್ತರ ಬಯಸುತ್ತಾ ನ್ಯಾಯ ದೊರಕಿಸಲು ಆಗ್ರಹಿಸುತ್ತೇನೆ

ಶ್ರೀ ಬಸವರಾಜ್ ಪಾಟೀಲ್ ಅನ್ವಾರಿ.—ಕೃಷಿ ವಿಶ್ವ ವಿದ್ಯಾನಿಲಯದ ನಿಯಂತ್ರಣಕ್ಕೊಳಪಟ್ಟ ೪ ಕೃಷಿ ಕ್ಷೇತ್ರಗಳು ಕರ್ನಾಟಕ ರಾಜ್ಯದಲ್ಲಿವೆ. ಈ ಕೃಷಿ ಕ್ಷೇತ್ರಗಳಲ್ಲಿ ಖಾಯಂ ಮಾನಕ್ಕನುಸಾರವಾಗಿ ಸುಮಾರು ೩೦೦೦ ರಿಂದ ೩೫೦೦ ಜನರನ್ನು ಕೃಷಿ ಕೆಲಸಗಳಿಗಾಗಿ ಹಂಗಾಮಿಯಾಗಿ ದಿನಗೂಲಿಯ ಮೇಲೆ ತೆಗೆದುಕೊಳ್ಳಲಾಗುತ್ತಿದೆ. ಈ ಕೃಷಿ ಕೆಲಸಗಾರರಿಗೆ ವರ್ಷವಿಡೀ ಕೆಲಸ ಇರುವುದಿಲ್ಲ. ಇವರಿಗೆ ಕರ್ನಾಟಕ ಸರ್ಕಾರವು ಆಗಿಂದಾಗ್ಗೆ ನಿಗದಿ ಪಡಿಸಿದ ದರಗಳಲ್ಲಿ ದಿನಗೂಲಿಯನ್ನು ಕೊಡಲಾಗುತ್ತಿದೆ. ದಿನಗೂಲಿ ಕೆಲಸಗಾರರ ದರವು ಸಹ ಹೆಚ್ಚುತ್ತಿರುವುದರಿಂದ ಹಾಗೂ ಕೃಷಿ ವಿಶ್ವ ವಿದ್ಯಾನಿಲಯದ ಆರ್ಥಿಕ ಕೊರತೆಯ ಕಾರಣದಿಂದ ಇವರುಗಳನ್ನು ವರ್ಷ ಪೂರ್ತಿ ಕೆಲಸಕ್ಕೆ ತೆಗೆದುಕೊಳ್ಳುವುದು ಸಾಧ್ಯವಾಗುವುದಿಲ್ಲ ಅಲ್ಲದೆ ಶ್ರೇಷ್ಠ ನ್ಯಾಯಾಲಯದ ತೀರ್ಪಿನಂತೆ ಕರ್ನಾಟಕ ಸರ್ಕಾರವು ಹೊರಡಿಸಿರುವ ಆಜ್ಞೆಯು ಈ ಕೆಲಸಗಾರರಿಗೆ ಅನ್ವಯಿಸುವುದಿಲ್ಲವಾದ್ದರಿಂದ ಅದನ್ನು ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ಅಳವಡಿಸಿಕೊಂಡಿಲ್ಲ.

೨) ತರೀಕೆರೆ ತಾಲ್ಲೂಕಿನ ಜನರಲ್ ಆಸ್ಪತ್ರೆಗೆ ಸಮರ್ಪಕವಾಗಿ ಔಷಧಿಗಳನ್ನು ಒದಗಿಸದೇ ಇರುವುದರ ಬಗ್ಗೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಅಧ್ಯಕ್ಷರೇ, ತರೀಕೆರೆ ತಾಲ್ಲೂಕಿನಲ್ಲಿ ಜನರಲ್ ಆಸ್ಪತ್ರೆಯಿದ್ದು ಆದಕ್ಕೆ ತಕ್ಕಂತೆ ಔಷದಿ ಸರಬರಾಜು ನಡೆಯದೆ ಜನತೆಗೆ ಬಹಳ ತೊಂದರೆಯಾಗಿರುತ್ತದೆ. ಆದನ್ನು ಯಾವಾಗ ಸರಿಪಡಿಸುವಿರಿ ಮತ್ತು ತರೀಕೆರೆ ತಾಲ್ಲೂಕು ಬೆಟ್ಟದಹಳ್ಳಿ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಸರ್ಕಾರದಿಂದ ಔಷಧಿ ಸರಬರಾಜಾಗಿದ್ದು, ಸರಬರಾಜು ಮಾಡುವ ಲಾರಿಯ ವ್ಯವಸ್ಥಾಪಕರು ಅದನ್ನು ಇಲ್ಲಿಯವರೆವಿಗೂ ಮುಟ್ಟಿಸದೆ ದುರುಪಯೋಗ ಮಾಡಿಕೊಂಡಿರುತ್ತಾರೆ. ನಾವು ಇದರ ಬಗ್ಗೆ ಅನೇಕ ಒತ್ತಡ, ಮನವಿ ಸಲ್ಲಿಸಿದಾಗ್ಯೂ ಯಾವ ಪ್ರಯೋಜನಕ್ಕೂ ಬಂದಿರುವುದಿಲ್ಲ. ತಾವು ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡು ಅಲ್ಲಿಯ ಜನತೆಗೆ ಅನುಕೂಲ ಮಾಡಿಕೊಡುವಿರಾ ? ಮತ್ತು